ಹಠವಿಡಿದು ಸಾಗುತ್ತಿತ್ತು. ಭಾಗಶಃ ಇಬ್ಬರೂ ತಮ್ಮ ಕೊನೆ ಇದೇನೇ ಎಂದುಕೊಂಡಿದ್ದರು. ಅಂತಹ ಹುಚ್ಚು ಹೊಳೆಯಲ್ಲಿ ಅವರಿಗೆ ಆಸರೆ ಇತ್ತೋ ಏನೋ; ಆ ಪ್ರವಾಹವೇ ಅವರನ್ನು ಹೊತ್ತಿಕೊಂಡು ತಂದು ಈಚೆ ದಂಡೆಗೆ ಬಿಟ್ಟಿತ್ತು. ವಿಸ್ಮಯ ಎನಿಸಿತ್ತು. ಈ ನದಿ ನಮ್ಮನ್ನು ಯಾಕೆ ಕ್ಷಮಿಸಿತು, ಉಳಿಸಿತು ಎಂದು ಮೂಕವಾಗಿದ್ದರು. ಮಳೆ ಕರಗಿತ್ತು. ಹೊಳೆ ಇಳಿದಿತ್ತು. ಬಿಸಿಲು ಮೂಡಿತ್ತು. ಬಾನು ತಿಳಿಯಾಗಿತ್ತು. ಬ್ಯಾರೆಲ್‌ನಲ್ಲಿ ತುಂಬಿಕೊಂಡಿದ್ದ ಪೆಟ್ರೋಲ್ ತೀರುತ್ತಾ ಬಂದಿತ್ತು. ಗಾಡಿ ತನಗೆ ಏನೂ ಆಗಿಯೇ ಇಲ್ಲ ಎಂಬಂತೆ ಸಿದ್ಧವಾಗಿತ್ತು. ಮತ್ತೇ ಹೊರಟರು. ಗೊತ್ತು ಗುರಿ ಇಲ್ಲದ ದಾರಿಯಲ್ಲಿ ಯಾರೋ ತಿರುಗಾಡಿದ್ದಾರೆ ಎಂಬ ಕುರುಹುಗಳು ಕಂಡವು. ಸಾಯೋದಿಕ್ಕಾಗಿ ನಾವು ಇಷ್ಟು ದೂರ ಬರಬೇಕಿತ್ತೇನಣ್ಣಾ ಎಂದು ಕೇಳಿದ. ಎಲ್ಲೋ ಸಾಯಬಹುದಿತ್ತು. ಅವರು ಸಾವನ್ನು ಹುಡುಕಿಕೊಂಡೇ ಬಂದಿದ್ದರಿಂದಲೋ ಏನೋ ಸಾವೇ ಅವರತ್ತ ಸುಳಿಯದೆ ತಪ್ಪಿಸಿಕೊಳ್ಳುತ್ತಿತ್ತು. ಸಾಕು! ಇಲ್ಲೇ ಎಲ್ಲಾದರೂ ನಿರ್ವಾಣ ಆಗಿ ಬಿಡುವ ಅಣ್ಣಾ ಎಂದ. ತಡಕೋ; ಯಾವಾಗ ಏನೇನಾಗಬೇಕೋ, ಅದು ಬಂದು ಆಗುವ ತನಕ ತಡಕೋ, ತಾಳ್ಮೆ ತಕೊ ಎನ್ನುತ್ತಾ ಸವಾರ ವೇಗ ಹೆಚ್ಚಿಸಿದ. ಪಿಶಾಚಿಗಳ ಹೊತ್ತೊಯ್ಯುವ ಗಾಡಿಗಳೂ ಹುಚ್ಚಾಗಿರುತ್ತವೇನೊ. ಆ ಸವಾರನೋ ತನ್ನನುಕೂಲಕ್ಕೆ ತಕ್ಕಂತೆ ಮರಮಟ್ಟು ತಗಡುಗಳ ಹೊಂದಿಸಿ ಒಂದು ಕ್ಯಾಬಿನ್ ತರದಲ್ಲಿ ಆ ವಾಹನವನ್ನು ವಿನ್ಯಾಸಗೊಳಿಸಿಕೊಂಡಿದ್ದ. ಅಷ್ಟಿಲ್ಲದಿದ್ದರೆ ಆ ಹುಚ್ಚು ಹೊಳೆಯಲ್ಲಿ ದೋಣಿಯಂತೆ ತೇಲಿಕೊಂಡು ಹೊರ ಬರುತ್ತಿರಲಿಲ್ಲ. ಕುದುರೆಗೆ ಪ್ರಾಯ ಬಂದಂತೆ ಓಡುತ್ತಿತ್ತು. ಒಂದು ಕ್ಷಣ ತಡವಾದರೂ ಲೆಕ್ಕ ತಪ್ಪುತ್ತದೆ. ಆಗಬಹುದಾದ್ದರ ಪರಿಣಾಮವೇ ಬೇರೆ ಆಗಿಬಿಡುತ್ತದೆ ಎಂಬಂತೆ ಗುರುತ್ವ ಬಲದಲ್ಲಿ ಚಲಿಸುತ್ತಿತ್ತು. ಅವರಿಬ್ಬರೂ ಯಾವತ್ತೂ ಸಮಯವನ್ನು ಪಾಲಿಸಿದವರೇ ಅಲ್ಲ. ಆದರೆ ಸಮಯ ಅವರನ್ನು ಬಿಟ್ಟಿರಲಿಲ್ಲ. ಹುಟ್ಟು ಸಾವು; ಈ ಇಹ ಪರಗಳೆಲ್ಲ ಒಂದು ಅಣುಕ್ಷಣವನ್ನೂ ತಪ್ಪಿ ನಡೆಯಲಾರವು ಎಂಬಂತೆ ಸೂರ್ಯ ಉರಿಯುತ್ತಿದ್ದ. ಮರುಭೂಮಿಯ ಮಳೆಯೇ ಹಾಗೆ. ಇಡೀ ಮರುಭೂಮಿ ಸ್ಮಶಾನದಂತಿತ್ತು. 'ಏನಣ್ಣಾ, ಈ ರಣ ರಣ ಮರಳುಗಾಡಿಗೆ ಬಂದೆವಲ್ಲಾ... ಇದು ಭೂಮಿಯ ಅಂಚು ಎನಿಸುತ್ತೆ' ಎಂದ ಕುಂಟ. 'ಅಂಚೋ ಮುಂಚೋ ಎಲ್ಲಿಗೊ ಒಟ್ಟನಲ್ಲಿ ಬಂದೆವಲ್ಲ ಬಿಡು. ಇಲ್ಲೂ ಮನುಷ್ಯರ ಹೆಜ್ಜೆಗಳಿವೆ ನೋಡು.'

'ಇವೆಲ್ಲಾ ಜೀವಂತ ಹೆಜ್ಜೆಗಳೇನಣ್ಣಾ... ಯಾವುದೋ ಕಾಲದಲ್ಲಿ ಹಾದುಹೋದವರ ಅಸ್ಥಿಪಂಜರಗಳು ಕಾಣುತ್ತಿವೆಯಲ್ಲಾ...?'

'ಹೌದು ಹೌದು... ಹ್ಯುಯಾನ್‌ತ್ಸಾಂಗ್ ಭಾರತಕ್ಕೆ ಬಂದಾಗಲೂ ಅವನಿಗೆ ದಾರಿ ತೋರಿದ್ದವರು ಸತ್ತವರೇ... ಅರ್ಧದಾರಿಯಲ್ಲೇ ಗುರಿ ಮುಟ್ಟಲಾಗದೆ ಮರುಭೂಮಿಯಲ್ಲಿ ದಿಕ್ಕೆಟ್ಟು ಸತ್ತರಲ್ಲಾ ಅವರ ಎಲುಬುಗಳೇ ದಾರಿ ಗುರುತಾಗಿ ದಾರಿ ತೋರಿದ್ದು. ನೀನೂ ಅಂತಹ ಒಂದು ತಲೆಬುರುಡೆ ಆಗು.' 'ಹೌದು... ಮೂಳೆಗಳು ಬಹಳ ಒಳ್ಳೆಯವು ಅಣ್ಣಾ... ಯಾಕೆ ಅಷ್ಟು ದೀರ್ಘಕಾಲ ಪಳೆಯುಳಿಕೆಯಾಗಿ ಸತ್ತಲ್ಲೇ ಮಲಗಿದ್ದು ಕಾಲಿಗೆ ಬಂದು ತೊಡರಿಕೊಳ್ಳುತ್ತವೆ ಹೇಳು... ಅವು ಗೆದ್ದವರ ಸ್ಮಾರಕ ಅಲ್ಲ ಅಣ್ಣ... ಸತ್ತವರ ಸಾರ್ಥಕತೆ!. ನಿನಗೆ ಬೈಬಲ್ ಗೊತ್ತೇನು? ಅಲ್ಲೂ ಇಂತಹ ಮಾತು ಬರ್‍ತವೆ ಎಂಬ ನೆನಪು ನನಗೆ. ಎಂದಾದರೂ ಚರ್ಚಿಗೆ ಹೋಗಿದ್ದೆಯಾ...?', 'ಈಗ ಇಲ್ಲಣ್ಣ... ಬಾಲ್ಯದಲ್ಲಿ ನನಗೆ ಯೇಸುಕ್ರಿಸ್ತನ ಮೇಲೆ ಬಹಳ ಸೆಳೆತ ಇತ್ತು. ಕಾರುಣ್ಯಮೂರ್ತಿ ಅವನು.' 'ಅದೇ ನೋಡು ವ್ಯಂಗ್ಯ... ಅಂತಹ ದೇವ ದೂತನನ್ನೂ ದೇವರು ಕೊನೆಗೂ ಕಾಯಲಿಲ್ಲ. ದೇವಪುತ್ರನನ್ನೇ ಮನುಷ್ಯರು ಕೊಂದು ಬಿಟ್ಟರು. ಯೇಸುವಿಗೂ ಸಾವನ್ನು ಮೀರಲು ಆಗಲಿಲ್ಲ. ಕೊನೆಗೆ ಮಾನವ ದೇವರನ್ನೂ ಕೊಂದುಬಿಟ್ಟ; ಅಂದರೆ ತನ್ನನ್ನು ತಾನೇ ನಿತ್ಯ ಕೊಂದುಕೊಳ್ಳುತ್ತಾ ಬಂದಿದ್ದಾನೆ. ಹುಚ್ಚರಿಗೆ ಅಮರರಾಗುವ ತೆವಲು... ಉಳಿಯಲು ಎಷ್ಟೊಂದು ಹುಸಿ ನಾಟಕ; ಸಾಕಾಯ್ತು ಮಾರಾಯ... ನಿನ್ನ ಕರಕೊಂಡು ಬಂದು ನಾನೇ ದಾರಿ ತಪ್ಪಿದೆ ಅನಿಸುತ್ತಿದೆ. ಏನೂ ಹೊಳೀತಾನೇ ಇಲ್ಲ... ಈಗೇನು ಮಾಡೋದು... ಒಟ್ಟಿಗೆ ಇಲ್ಲೇ ನಿರ್ವಾಣ ಆಗಿ ಬಿಡೋಣವೇ...' 'ನಿರ್ವಾಣ... ಆಹಾ! ನಿರ್ವಾಣವೇ? ಅಬ್ಬಾ ಅದು ಪರಮ ವಿಮೋಚನೆ ಅಣ್ಣಾ, ನಮಗೆ ಅದು ಸಾಧ್ಯವಿಲ್ಲ. ಬೇರೇನಾದರೂ ಮಾಡೋಣ. ತಂಪುಗಾಳಿ ತೇಲಿ ಬರುತ್ತಿದೆ. ಏನೋ ದಾರಿ